ತಾಯಿ' ಎಂದ ಗದ್ದರ್ ಕಣ್ಣುಗಳು ಹನಿಗೂಡಿದ್ದವು. ಗದ್ದರ್ ಎದುರು ಕುಂತು 'ಇಷ್ಟು ಆರ್ದ್ರ ಹೃದಯಿಯಾದ ನೀವು ಹೇಗೆ ಹಿಂಸೆಯಲ್ಲಿ ತೊಡಗುತ್ತೀರಿ ಮತ್ತು ಹಿಂಸೆಗೆ ಏಕೆ ಪ್ರಚೋದನೆ ನೀಡುತ್ತೀರಿ' ಕೇಳಿದ್ದರು ರಂಗರಾವ್.

'ಸಾಹೇಬರೆ ಯಾರೂ ಯಾವೊತ್ತೂ. ಬೇಕಾಗಿ ಹಿಂಸೆಯಲ್ಲಿ ತೊಡಗುವುದಿಲ್ಲ. ನಮ್ಮದು ಹಿಂಸೆಯಲ್ಲ, ಪ್ರತಿಹಿಂಸೆಯಷ್ಟೆ. ಅಹಿಂಸೆ ಎಲ್ಲಿ ಅಸಹಾಯಕವಾಗಿ ಕೈ ಚೆಲ್ಲುತ್ತದೋ ಅಲ್ಲಿ ನಾವು ಸಕ್ರಿಯವಾಗುತ್ತೇವೆ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ಗಾಂಧೀಜಿ ಎಲ್ಲಿ ನಿಲ್ಲುತ್ತಾರೋ ಅಲ್ಲಿಂದ ನಾವು ಪ್ರಾರಂಭವಾಗುತ್ತೇವೆ. ನಮ್ಮ ಹೋರಾಟ ಪೊಲೀಸರ ವಿರುದ್ಧ ಅಲ್ಲ ಸಾಹೇಬರೆ, ನಮ್ಮ ಹೋರಾಟ ವ್ಯವಸ್ಥೆಯ ವಿರುದ್ಧ, ಪ್ರಭುತ್ವದ ವಿರುದ್ಧ. ಪ್ರತಿಯೊಬ್ಬ ಪ್ರಜೆಗೂ ದುಡಿದು ತಿನ್ನಲು ಒಂದಿಷ್ಟು ಭೂಮಿ ಇಲ್ಲದಿದ್ದರೆ ಹೇಗೆ ಸಾಹೇಬರೆ. ಅನ್ನ, ಬಟ್ಟೆ, ವಸತಿ ಸಿಕ್ಕಿದರೆ ಜನ ಹಿಂಸೆಗೆ ಯಾಕೆ ಇಳಿಯುತ್ತಾರೆ ಹೇಳಿ..? ಗದ್ದರ್ ಮಾತು ನಿಲ್ಲಿಸಿ ನೀರು ಕುಡಿದಿದ್ದರು.

'ನಿಮ್ಮ ಹೋರಾಟ ಸಾಂವಿಧಾನಿಕವಾಗಿರಬೇಕು. ಕಾನೂನನ್ನು ಕೈಗೆತ್ತಿಕೊಂಡರೆ ಹೇಗೆ?' ರಂಗರಾವ್ ತುಸು ಗಂಭೀರವಾಗಿಯೇ ಮಾತನಾಡಿದ್ದರು.

'ನಿಮಗೆ ಗೊತ್ತು ಸಾಹೇಬರೆ ಕಾನೂನುಗಳನ್ನು ರಚಿಸಿರುವುದು ಸಾಮಾಜಿಕ ನ್ಯಾಯದ ಆಧಾರದ ಮೇಲೆ. ಅದೊಂದು ಅಪ್ಪಟ ಕಾಮನ್ ಸೆನ್ಸ್. ಅದು ಬಿಟ್ಟು ಆಳುವವರು ಕಾನೂನು ಕಟ್ಟಲೆಗಳನ್ನು ತಮಗೆ ಇಷ್ಟ ಬಂದಂತೆ ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರೆ ಅವುಗಳ ಪಾವಿತ್ರ್ಯ ಎಲ್ಲಿ ಉಳಿದುಕೊಳ್ಳುತ್ತದೆ. ಜನಸಾಮಾನ್ಯರ ನೆರವಿಗೆ ಬರದ, ಅವರ ಕಷ್ಟ ಸಂಕಟಗಳನ್ನು ನೀಗಿಸದ ಕಾನೂನುಗಳು ಇದ್ದರೆಷ್ಟು ಬಿಟ್ಟರೆಷ್ಟು ಸಾಹೇಬರೆ? ಅದಕ್ಕೆ ನಮ್ಮ ಗೆಳೆಯ ವರವರ ರಾವ್ ಏನೆಂದು ಹೇಳ್ತಾರೆಂದರೆ. 'ಅಪರಾಧವೇ ಅಧಿಕಾರವಾಗಿ ಪ್ರಜೆಗಳನ್ನು ಅಪರಾಧಿಗಳನ್ನಾಗಿ ಮಾಡುತ್ತಿದ್ದರೆ ಕಣ್ಣಿದ್ದು, ಕಿವಿಯಿದ್ದು ಬಾಯಿದ್ದು ಮಾತನಾಡದ ಪ್ರತಿಯೊಬ್ಬ ಪ್ರಜೆಯೂ ಅಪರಾಧಿಯೇ' ಎಂದು. ಇವೊತ್ತು ನನ್ನ ಜೊತೆ ನಿಮ್ಮನ್ನು ಕಾಣಲು ವರವರ ರಾವ್ ಕೂಡಾ ಬರಬೇಕಿತ್ತು. ಅವರಿಗೆ ಹೈದರಾಬಾದಿನಲ್ಲಿ ಬೇರೆ ಅರ್ಜೆಂಟ್ ಕೆಲಸ ಇದ್ದಿದ್ದರಿಂದ ಬರಲಾಗಲಿಲ್ಲ' ಗದ್ದರ್ ಮಾತುಗಳನ್ನು ಮಧ್ಯದಲ್ಲಿ ಮುರಿದು, 'ನೀವು ಒಂಟಿಯಾಗಿ ಸಿಕ್ಕಿರುವಿರಿ ನಾನೀಗ ನಿಮ್ಮನ್ನು ಶೂಟ್ ಮಾಡಿದರೆ ಹೇಗೆ' ರಂಗರಾವ್ ಸ್ವಲ್ಪ ಗಂಭೀರವಾಗಿಯೇ ನುಡಿದಿದ್ದರು.

ರಂಗರಾವ್ ಮಾತುಗಳಿಂದ ಗದ್ದರ್ ಸ್ವಲ್ಪವೂ ವಿಚಲಿತರಾಗಲಿಲ್ಲ. ಬದಲಾಗಿ ಬಹಳ ಪ್ರಶಾಂತವಾಗಿ ನಗುತ್ತಾ 'ಶೂಟ್ ಮಾಡಿ ಸಾಹೇಬರೆ, ಸಾವಿಗೆ ಹೆದರುವವರು ಹೋರಾಟಕ್ಕೆಂದೂ ಇಳಿಯುವುದಿಲ್ಲ. ಮತ್ತು ನಿಮ್ಮಂಥ ನಿಷ್ಠಾವಂತ ಅಧಿಕಾರಿಗಳು ಕೂಡ ಸಾವಿಗೆ ಅಂಜುವುದಿಲ್ಲ. ಅವೊತ್ತು ನಲ್ಲಮಲ್ಲ ಅರಣ್ಯದಲ್ಲಿ ಪೊದೆಗಳು ನಮ್ಮಿಬ್ಬರ ಮಧ್ಯ ಅಡ್ಡ ಬರದಿದ್ದಿದ್ದರೆ ನೀವೋ ಅಥವಾ ನಾನೋ ಅಂದೇ ಪ್ರಾಣ ಖಂಡಿತಾ ಕಳೆದುಕೊಳ್ಳುತ್ತಿದ್ದೆವು. ಭೂಮಿಯ ಮೇಲಿನ ಪ್ರತಿಯೊಂದು ಜೀವಿಯೂ ಹುಟ್ಟಿದ ಮೇಲೆ ಸಾಯುವುದು ಖಚಿತವಲ್ಲವೇ ಸಾಹೇಬರೆ. ಸುಟ್ಟು ಬಿಡಿ, ನಾನು ನಿಮ್ಮ ಅಂಗಳದಲ್ಲಿದ್ದೇನೆ. ಹಾಗೇನಾದರೂ ಆದರೆ ಗೆಲ್ಲುವುದು ನಾನೇ. ನಾನು ಗೆದ್ದರೆ ನೀವು ಸೋಲಲೇ ಬೇಕು. ನಾವು ಯಾರಿಗಾದರೂ ಸುಳ್ಳು ಹೇಳಬಹುದು. ಆದರೆ ನಮಗೆ ನಾವು ಎಂದೂ ಸುಳ್ಳು ಹೇಳಿಕೊಳ್ಳಲು ಸಾಧ್ಯವಿಲ್ಲ. ಅದೆಲ್ಲ ಇರಲಿ, ನಿಮಗೆ ನಾನೊಂದು ಮುಖ್ಯವಾದ ಸತ್ಯ ಹೇಳಲು ಬಂದಿರುವೆ ಸಾಹೇಬರೆ' ಗದ್ದರ್ ಮಾತುಗಳಲ್ಲಿ ಅಧ್ಯಾತ್ಮದ ಪೊರೆ ಕಟ್ಟುತ್ತಿದೆಯೆನಿಸಿತ್ತು ರಂಗರಾವ್‌ರವರಿಗೆ. 'ಅದೇನು ಹೇಳಿ' ರಂಗರಾವ್ ಕಿವಿ ಬಿಚ್ಚಿದರು.

'ನಿಮಗೆ ಮೊದಲೇ ಹೇಳಿದೆ ನಮ್ಮ ಹಿಂಸೆ ಪ್ರತಿಹಿಂಸೆಯೇ ಹೊರತು ಹಿಂಸೆಯಲ್ಲವೆಂದು. ನಾನು ಹೇಳುವ ಸಂಗತಿಯಿಂದ ನೀವೇನೂ ವಿಚಲಿತರಾಗುವುದು ಬೇಡ. ಅಂದು ಎಸ್ಪಿ ವೈ.ಎಸ್. ರೆಡ್ಡಿ ಸಾಹೇಬರ ಕೊರಳು ಪಟ್ಟಿ ಹಿಡಿದು ಜಗ್ಗಿದ ಯುವಕನನ್ನು ಏಕೆ ಹಾಗೆ ಮಾಡಿದ್ದೆಂದು ಒಂದು ಮಾತು ಕೇಳಿದ್ದರೆ ಅವೊತ್ತೇ ಈ ಸತ್ಯ ಹೊರ ಬೀಳುತ್ತಿತ್ತು. ನೀವು ಆ ಯುವಕನನ್ನು ಜಂಗಲ್ ಪೊಲೀಸ್ ಸ್ಟೇಷನ್ನಿಗೆ ಎಳೆದುಕೊಂಡು ಹೋಗಿ ಅಂಥ ವಿಚಿತ್ರವಾದ ಚಿತ್ರಹಿಂಸೆಯನ್ನು ಬಹುಶಃ ನೀಡುತ್ತಿರಲಿಲ್ಲ. ಆ ಯುವಕನ ಹೆಸರು ಪೆದ್ದಚೆರುವು ಯದುನಂದನ. ಅದು ನಿಮಗೆ ಗೊತ್ತು. ಆತ ಸಿವಿಲ್ ಇಂಜಿನಿಯರಿಂಗ್ ಮಾಡಿಕೊಂಡು ಕೇವಲ ವರ್ಷವಾಗಿತ್ತು. ಇಂಜಿನಿಯರಿಂಗ್ ಓದುವಾಗಲೇ